ಇವನ ಮೈ ದಾಟಿಕೊಂಡು ಎಲ್ಲಿಗ್ ಹೋಗುತ್ತೆ ಎನ್ನುವುದೇ ವಿಸ್ಮಯ. ಒಮ್ಮೆ ಅವನ ಹೆಂಡತಿಯನ್ನ ಕೇಳಿದೆ. "ದಿವ್ಸದಾಗ ಎಷ್ಟ ಸಾರಿ ಉಣಾತಾನವ ಇವ್ನ?"

"ದಿವ್ಸದಾಗ ಯೋಳೆಂಟು ಸಾರಿ ಉಣತತಿ ಕಣಕ್ಕ. ಉಣ್ಣಾದು ಎತ್ತಗಾರ ಸೆಟಗಂದೋಗ್ಲಿ... ಅಡಿಗಿ ಮಾಡ್ತನಿ ಅಂತ ಬಂದು ನನ್ ಕ್ಯಲಸ ಹದಗೆಡಿಸಿ ಹಳ್ಳ ಹಿಡಸ್ತತಿ. ಇದು ಎಷ್ಟ್ ಸತಿ ತಿಂತನಿ ಅಂದ್ರೂ ಏನಾರಾ ಮಾಡಿ ಹಾಕನ ಅದಕ್ಕೇನು... ಆದ್ರ ಇದು ಅಡಿಗಿ ಮನಿಗೆ ಒಂದ್ ಸತಿ ಬಂತು ಅಂದ್ರೆ ನನ್ನ ತಲಿ ಮುಸ್ರಿ ಬಾನಿ ಆಕತಿ ಕಣಕ..." ಅಂತ ಹೇಳಿಕೊಂಡು ನನ್ನನ್ನ ಅಚ್ಚರಿಗೆ ನೂಕಿದ್ದಳು.

ಅಲ್ಲಾ, ತನ್ನ ಅಡುಗೆ ತಾನೇ ಮಾಡಿಕೊಳ್ಳುವೆ ಅಂತ ಹೇಳುವ ಗಂಡ ಸಿಕ್ಕೋದು ಕಷ್ಟ. ತನಗೆ ಸಿಕ್ಕ ಅಪರೂಪದ ರತ್ನವನ್ನ ಜೋಪಾನ ಮಾಡದೆ ಹೀಗೆ ವಜ್ರಕ್ಕೂ ಗಾಜಿಗೂ ವ್ಯತ್ಯಾಸವೇ ಇಲ್ಲದ ಹಾಗೆ ಕಂಪ್ಲೇಂಟು ಹೇಳ್ತಾಳಲ್ಲಾ ಅಂದುಕೊಂಡಿದ್ದೆ. ಆದರೆ, ಈ ಒಗಟು ಅರ್ಥ ಆಗೋಕೆ ಸಾಕಷ್ಟು ಸಮಯ ಹಿಡೀತು. ಜೊತೆಗೆ ಇದೇ ರೀತಿಯ ಹಲವು ಆಯಾಮಗಳ ಪರಿಚಯ ಆಗುತ್ತಾ ಯಾವುದು ವೈಯಕ್ತಿಕವೋ ಅದು ಸಾರ್ವತ್ರಿಕ ಕೂಡ ಆಗಿರುತ್ತೆ ಅನ್ನುವ ಸತ್ಯದರ್ಶನ ಕೂಡ ಆಯ್ತು.

ಇದು ಅಡುಗೆ ಮಾಡುವ ಗಂಡಸರನ್ನು ಹೀಗಳೆಯುವ ಅಭಿಪ್ರಾಯ ಅಲ್ಲ. ಆದರೆ, ಅಡುಗೆ ಎನ್ನುವ ಕ್ರಿಯೆಗೆ ನಾವು ಕೊಟ್ಟಿರುವ (ಕೆಲವೊಮ್ಮೆ ಅನವಶ್ಯಕ ಅನ್ನಿಸುವಷ್ಟು) ಮಹತ್ವದ ಬಗ್ಗೆ ನನಗೆ ಕನಿಕರ ಹುಟ್ಟುತ್ತೆ. ಅಡುಗೆಮನೆ ಎನ್ನುವ ಜಾಗದಲ್ಲಿ ಹುಟ್ಟುವ ಪದಾರ್ಥಗಳು, ಅವು ನಾಲಿಗೆ ಎನ್ನುವ ಎರಡಿಂಚಿನ ಅಂಗದ ಸಂವೇದನೆ ಆವರಿಸಿ ಎಂಥೆಂಥಾ ರಾಜಕೀಯವನ್ನು ಹುಟ್ಟುಹಾಕಿ ಪೋಷಿಸುತ್ತವೆ ಎಂದು ಯೋಚಿಸಿದರೆ ಇದರ ಸಂಕೀರ್ಣತೆ ಅರ್ಥ ಆಗಬಹುದು. ಮೂಗಿಗೆ ವಾಸನೆ ಹಿಡಿಸಿ, ಕಣ್ಣಿಗೆ ಚಂದ ಕಂಡು, ನಾಲಿಗೆ ದಾಟಿ ಗಂಟಲಿನಿಂದ ಕೆಳಗಿಳಿದರೆ ಸೊಪ್ಪೂ ಉಪ್ಪೂ ಮಾಂಸವೂ ಎಲ್ಲವೂ ಒಂದೇ! ಆದರೂ ಆಹಾರದ ಪ್ರಯಾಣಕ್ಕೂ ಮುನ್ನ ಆರಂಭವಾಗುವ ಆ ಚಿಕ್ಕ "ಶೋ" ಎಷ್ಟೆಲ್ಲಾ ತಯಾರಿ ಬೇಡುತ್ತದೆ!

